Reg No BG 155 15-1-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮುಖ್ಯ ಮಂತ್ರಿಗಳವರಿಗೆ ಕನ್ನಡ ಚಳವಳಿಗಾರರ ಬಿನ್ನವತ್ತಳೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಸೇತುವೆ ಉದ್ಘಾಟನೆ

ಮಡಕೇರಿ— ಇಲ್ಲಿಗೆ ಸ್ವಲ್ಪ ದೂರದಲ್ಲಿ ಕಾವೇರಿ ನದಿಯ ಮೇಲೆ ಕಟ್ಟಲಾಗಿರುವ ರೂ. 7 ಲಕ್ಷದ 363 ಅಡಿ ಸೇತುವೆಯನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಉದ್ಘಾಟಿಸಿದರು.

ಹಾರ ತುರಾಯಿ

ಚಂಡೀಘರ್— ಪ್ರಧಾನಿ ಇಂದಿರಾರವರು ತಮ್ಮ ವೈಯಕ್ತಿಕ ವಿಮಾನದಿಂದ ಇಳಿದಾಗ ಅಲ್ಲಿದ್ದವರು ಅವರಿಗೆ ಹೂವು ತುರಾಯಿ ಆರ್ಪಿಸಲು ಮುನ್ನುಗಿದರು – ಹೂಗೆಳನ್ನು ಹೊರಡುವಾಗ ಕೊಡಬೇಕೆಂದೂ ಆಗಮಿಸಿದಾಗ ಅಲ್ಲವೆಂದೂ ನಾನು ಹೇಳುತ್ತಿರುವುದು ಎಂದರು – ಆದರೂ ಆರ್ಪಿಸಲಾದ ತುಂಬಾ ಹಾರತುರಾಯಿಗಳನ್ನು ನತ್ತಾ ಕೈಮುಗಿಯುತ್ತಾ ಸ್ವೀಕರಿಸಿದರು.

★

ವಿದೇಶೀ ಮದ್ಯ ಸಿಗರೇಟು ವಶ

ಬೊಂಬಾಯಿ— ಮಜಗಾಂ ಡಾಕ್‌ಗೆ ದೂರದಲ್ಲಿ ಸಮುದ್ರದಲ್ಲಿ ಎರಡು ಹಡಗುಗಳನ್ನು ಅಡ್ಡಗಟ್ಟಿ ಆವುಗಳಲ್ಲಿದ ರೂ. 230000 ಬೆಲೆಯ ವಿದೇಶೀ ಮದ್ಯ ಮತ್ತು ಸಿಗರೇಟುಗಳನ್ನು ಭ್ರಷ್ಟಾಚಾರ ವಿರುದ್ಧ ಇಲಾಖೆಯವರು ವಶಪಡಿಸಿಕೊಂಡರು.

ವಿಮಾನುಗಳಿಂದ ವಿದ್ಯುಚ್ಛಕ್ತಿಗೆ ಆತಂಕ

ಸೈಜನುಲ್ (ಇಂಗ್ಲೆಂಡ್) — ಬ್ರಿಟನ್ನಿನ ಅತಿ ದೊಡ್ಡದಾದ ಮತ್ತು ಶಕ್ತಿಯುತವಾದ 70 ಮಿಲಿಯ ಪೌಂಡುಗಳ ಅಣು ಶಕ್ತಿ ಸ್ಟೇಷನ್ನಿನಲ್ಲಿಯ ಕೂಲಿಂಗ್ ಸಿಸ್ಟಂನಲ್ಲಿ ಸೇರಿಬಿಟ್ಟು ಕೆಲಸ ನಿಂತಿತು – ಪೂರ್ವ ಇಂಗ್ಲೆಂಡಿನ ಮಿಲಿಯ ಮನೆಗಳಿಗೆ ಇದ್ದು ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿದೆ.

○

ಟ್ರಾಕ್ಟರುಗಳು

ಭಾರತವು ಯುಗೊಸ್ಲಾವಿಯಾದಿಂದ 4.5 ಮಿಲಿಯ ಡಾಲರುಗಳ ಟ್ರಾಕ್ಟರುಗಳನ್ನು ಪಡೆಯಲಿದೆ.

●

ಸ್ಪೇರ್ ಮಾಸ್ಟರುಗಳು

ಬೆಂಗಳೂರು— ಮೈಸೂರು ವಿಭಾಗದ ಅಖಿಲ ಭಾರತ ಸ್ಪೇರ್‌ಮಾಸ್ಟರು ಸಂಘವು ಉತ್ತಮ ಸೇವಾ ನಿಯಮಗಳು, ಮತ್ತು ಹೆಚ್ಚು ಸಂಬಳದ ಕೇಳಿಕೆ ಹಾಕಿದೆ

ಮುಖ್ಯ ಮಂತ್ರಿಗಳಿಗೆ ಬಿನ್ನವತ್ತಳೆ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರಿಗೆ 10 ವಿಷಯಗಳನ್ನೊಳಗೊಂಡ ಬಿನ್ನವತ್ತಳೆಯನ್ನು ಶ್ರೀ ನಾಟಕಲ್ ನಾಗರಾಜರವರು ಅರ್ಪಿಸಿದರು – ಅದರಲ್ಲಿ ಕಾರ್ಪೊರೇಷನ್ ಕೌನ್ಸಿಲ್ ಚುನಾವಣೆಯನ್ನು ಮಾರ್ಚಿಯಲ್ಲಿ ನಡೆಸಲೂ, ರಾಜ್ಯದ ಹೆಸರನ್ನು ಕರ್ನಾಟಕವೆಂದು ನಾಮಕರಣಮಾಡಲೂ, ಮಹಾಜನ ಸಮಿತಿ ವರದಿಯನ್ನು ಕೇಂದ್ರವು ಜಾರಿಗೆ ತರುವಂತೆ ಒತ್ತಾಯಮಾಡಲೂ, ನೆರೆ ರಾಜ್ಯಗಳಾದ ಮದರಾಸು ಮತ್ತು ಆಂಧ್ರದಲ್ಲಿನ ಕನ್ನಡ ಭಾಗಗಳನ್ನು ರಾಜ್ಯಕ್ಕೆ ಸೇರ್ಪಡೆ ಮಾಡಲೂ ಒತ್ತಾಯಪಡಿಸಲಾಗಿದೆ – ಇದಕ್ಕೆ ಮುಂಚೆ ಕನ್ನಡ ಚಳವಳಿಗಾರರ ವಿರವಣಿಗೆಯು ಮೈಸೂರು ಬ್ಯಾಂಕು ಸ್ಕ್ವೇರಿನಿಂದ ಸೆಕ್ರಟೇರಿಯಟ್ ವರೆಗೆ ನಡೆಯಿತು.

★

ವಿದ್ಯಾರ್ಥಿ ಪ್ರತಿನಿಧಿಗಳು

ತಿರುವನಂತಪುರಂ— ಕೇರಳ ವಿಶ್ವವಿದ್ಯಾಲಯದ ಸೆನೇಟಿನಲ್ಲಿ ಮೂರು ಮಂದಿ ಚುನಾಯಿತ ವಿದ್ಯಾರ್ಥಿ ಪ್ರತಿನಿಧಿಗಳಿರುವಂತೆ ಕೇರಳ ವಿಶ್ವವಿದ್ಯಾಲಯದ ಪುನರ್ರಚಿತ ಕಾರ್ಯದಲ್ಲಿನ ಮಸೂದೆಯಲ್ಲಿ ಈ ಅಧಿಕೃತ ತಿದ್ದುಪಡಿ ಇದೆ.

●

ಬ್ರಿಟನ್ನಿನಲ್ಲಿ ಗಾಂಧಿ ಅಂಚೇಚೀಟಿ

ಲಂಡನ್— ಗಾಂಧಿ ಶತಮಾನ ವರ್ಷ ಸ್ಮಾರಕವಾಗಿ ಬ್ರಿಟನ್ ಈ ವರ್ಷ ಗಾಂಧಿ ಅಂಚೇಚೀಟಿಯನ್ನು ಹೊರಡಿಸಲಿದೆ – ಸಾಗರದಾಚೆಯ ರಾಜಕೀಯವೇತ್ತರು ಬ್ರಿಟನ್ ಅಂಚೇಚೀಟಿಯಲ್ಲಿ ಸ್ಮರಿಸಲಾಗಿರುವುದು ಇದು ಪ್ರಪ್ರಥಮ.

○

★ ಜನ್ಮು– ಅನ್ನಿಯಾದ ಕಮ್ಯುನಿಸ್ಟ್ ಪಾರ್ಟಿಯ ಎಲ್ಲಾ ಸದಸ್ಯರೂ ರಾಜೀನಾಮೆ ಕೊಟ್ಟಿದ್ದಾರೆ.

Mysore Government Electric Factory

MYSORE ROAD, BANGALORE-2.

.... Established in 1934 ....

Manufacturers and distributors of
1. Power Transformers
2. Transmission Line Tower
3. Scientific Surveying Instruments
4. Plastic Industrial Articles and
5. Street Light Fittings

ಡಾ॥ ಮೋದಿಯವರ ಕಾರ್ಯಕ್ರಮ

ನೇತ್ರ ತಾಜ್ಞ ಪದ್ಮಭೂಷಣ ಡಾ॥ ಎಂ. ಸಿ. ಮೋದಿಯವರ ನೇತ್ರ ಪರೀಕ್ಷಾ ಕಾರ್ಯಕ್ರಮವಿದು, ಅಪರೇಷನ್ನಿಗೆ ಸೂಕ್ತವಾಗಿ ಕಂಡುಬಂದ ರೋಗಿಗಳು ಮೈಸೂರು ನಂಜರಾಜ ಬಹದ್ದೂರು ಛತ್ರದಲ್ಲಿನ ತಾ॥ 20 ರಂದಿನ ಉಚಿತ ನೇತ್ರ ಅಪರೇಷನ್ ಕ್ಯಾಂಪಿಗೆ ಬರಬೇಕು.

ತಾ. 17 ರಾಮನಗರ, ಚನ್ನಪಟ್ಟಣ, ಮೂವತ್ತಾರು, ಮಂಡ್ಯ, ಶ್ರೀರಂಗಪಟ್ಟಣ, ತಾ॥ 18 ನಂಜನಗೂಡು, ಟಿ. ನರಸೀಪುರ, ಹೊಳೆನರಸೀಪುರ, ಯಳಂದೂರು, ಚಾಮರಾಜನಗರ, ತಾ॥ 19 ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ ತಾ॥ 20 ಮೈಸೂರು.

★

ಘರ್ಷಣೆ

ಸುಂಕೇಕೈಯಮತ್ತೂರಿನಲ್ಲಿ ಕಾಂಗ್ರೆಸ್– ಡಿಎಂಕೆ ಸಹಾನುಭೂತಿದಾರರಲ್ಲಿಯ ಘರ್ಷಣೆಯಲ್ಲಿ ಇಬ್ಬರು ಚೂರಿ ಇರಿತಕ್ಕೂ ಮೂವರು ಕಲ್ಲಿನ ಹೊಡೆತಕ್ಕೂ ಗುರಿಯಾದರು.

★

ವಿದ್ಯಾರ್ಥಿಗಳ ಕಾರ್ಯ

ಖಮ್ಮಾಂ— ಆಂಧ್ರದ ಪಟ್ಟಣಗಳಿಂದ ಬರುತ್ತಿದ್ದ ಬಸ್ಸುಗಳನ್ನು ಅಡ್ಡಕಟ್ಟಿ ನಿಲ್ಲಿಸುತ್ತಿದ್ದ ವಿದ್ಯಾರ್ಥಿಗಳಿಗೂ ಪೋಲೀಸರಿಗೂ ಆದ ಘರ್ಷಣೆಯಲ್ಲಿ ಒಬ್ಬ ಪೋಲೀಸನು ಗಾಯಗೊಂಡನು.

ಮಹಾಜ್ಞ ಕಮಿಷ್ಠ

ಬೆಂಗಳೂರು— ಶಾಸನಸಭೆಗಳ ಜಂಟಿ ಅಧಿವೇಶನದಲ್ಲಿ ಗೌರ್ನರ್ ಶ್ರೀ ಪಠಕ್ ರವರು ಮಾಡಿದ ಭಾಷಣದಲ್ಲಿ– ಕೇಂದ್ರವು ಮಹಾರಾಷ್ಟ್ರ–ಮೈಸೂರು ಮತ್ತು ಕೇರಳ–ಮೈಸೂರುಗಳ ಗಡಿವ್ಯಾಜ್ಯ ಸಂಬಂಧದಲ್ಲಿ ನ ಮಹಾಜ್ಞ ಕಮಿಷ್ಠ ವರದಿಯ ವಿಚಾರಲ್ಲಿ ನಿರ್ಧಾರ ಕೈಗೊಳ್ಳದಿರುವದಕ್ಕೆ ವಿಷಾದ ಸೂಚಿಸಿದರು — ಇದು ಬೇಗನೇ ವ್ಯವಸ್ಥೆಯಾಗಬೇಕೆಂದು ಹೇಳಿದರು.

○

ಕೇರಳ ಶಾಸನಸಭೆಯಲ್ಲಿ

ತ್ರಿವೇಂದ್ರಂ— ಶಾಸನಸಭೆಗೆ ಪ್ರೇಕ್ಷಕರಾಗಿ ಬಂದಿದ್ದ 7 ಮಂದಿ ಸ್ತ್ರೀಯರು (ಕುಟುಂಬ ಯೋಜನೆ ಸ್ವಯಂಸೇವಕರು) ಹೆಚ್ಚು ಸಂಭಾವನೆಗಾಗಿ ಸಿಕ್ಕಾಪಟ್ಟೆ ಅರಚಿಕೊಳ್ಳಲು ಮಹಿಳಾ ಪೋಸರಿಗೆ ಪುರುಷ ಪೋಲೀಸರೂ ಬೆಂಬಲಿಸಿ ಅವರನ್ನು ಹೊರ ಹಾಕಲಾಯಿತು— ಕೂಡಲೇ ಏರ್ಪಡಿಸಲಾದ ಒಂದು ಸಮಿತಿ ಇವರಿಗೆ ಒಂದು ವಾರ ಸಾದಾ ಸಜಾ ವಿಧಿಸಿತು.

●

ಸಲಹೆ ತಿರಸ್ಕಾರ

ನವದೆಹಲಿ— ಕೇಂದ್ರ–ರಾಜ್ಯಗಳ ಸಂಬಂಧವನ್ನು ಸರಿಪಡಿಸಲು ರಾಜ್ಯಾಂಗದ 264 ನೇ ವಿಧಿ ಪ್ರಕಾರ ಅಂತರರಾಜ್ಯ ಸಮಿತಿ ಏರ್ಪಡಿಸಬೇಕೆಂಬ ಕೇರಳ ಮುಖ್ಯಮಂತ್ರಿ ಶ್ರೀ ನಂಬೂದರಿಪಾದರ ಕೋರಿಕೆಯನ್ನು ಕೇಂದ್ರ ತಿರಸ್ಕರಿಸಿದೆ



Help The Gorakshana

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲಾಂಡ್ಸ್ ಜಯಪ್ರದ 4ನೇ ವಾರ

ಅದ್ಭುತ, ಅಸಮಾನ, ಅಸಾಧಾರಣ ಫಿಲಂಗೀಳಿನ ವ್ಯಕ್ತಿಗಳ ವೈಭವಪೂರಿತ ಆಗಮನ

— ಜೆಮಿನಿಯವರ ಹಾಸ್ಯಮಯ ವರ್ಣರಂಜಿತ ಚಿತ್ರ (ಹಿಂದಿ) —

ತ್ರೀನ್ ಬಹುರಾಣಿಯಾ

ತಾರಾಗಣ — ಸಾಹುಕಾರ್ ಜಾನಕಿ, ಕಾಂಚನ, ಜಯಂತಿ, ಶಶಿಕಲಾ, ಆಘಾ, ರಮೇಶ್‌ದೇವ್, ರಾಜೇಂದ್ರನಾಥ್, ಪೃಥ್ವಿರಾಜ್ ಕಪೂರ್

[ದಿನ 3 ಪ್ರದರ್ಶನಗಳು]

ಅಪೆರಾ— 10-1-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಕಾದಲ್ ವಾಹನಂ

ನಟವರ್ಗ— ಎಂ ಜಿ ರಾಮಚಂದ್ರ್, ತಾಯ್ ನಾಗೇಶ್, ಅಶೋಕ್, ಸ್ಯಾಂಜೋ ಚಿನ್ನಪ್ಪದೇವರ್, ಸುಂದರರಾಜ್, ಜಯಲಲಿತ, ಮನೋರಮ

.... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow), Sri Apanthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4